ತಿಂದೇ ಇಲ್ಲ. ಇದೂ ಕೂಡ ಭಗವಂತನ ಇಚ್ಛೆಯಲ್ಲವೆ?'' ಈ ಉತ್ತರ ಸುಫಿಯನ್‌ನ ಹೃದಯವನ್ನು ತಟ್ಟಿತು. ರಬಿಯಾಳ ಅಪೂರ್ವ ತ್ಯಾಗವನ್ನು ಕಂಡು ಅವನು ಮುಗ್ಧನಾದ.

ರಬಿಯಾಳ ಭಗವಂತನ ಮೇಲಿನ ವಿಶ್ವಾಸ ಎಣೆಯಿಲ್ಲದ್ದು. ಒಮ್ಮೆ ರಬಿಯಾಳ ಹತ್ತಿರ ಎರಡು ರೊಟ್ಟಿಗಳು ಮಾತ್ರವೇ ಉಳಿದಿದ್ದವು. ಬಹಳ ಹಸಿವೆಯಿಂದ ಕಂಗಾಲಾಗಿದ್ದ ಇಬ್ಬರು ಫಕೀರರು ಆಹಾರ ಕೇಳಿ ಬಂದರು. ಅಷ್ಟರಲ್ಲಿ ಅಷ್ಟೊಂದು ಹಸಿವೆ ಇರದಿದ್ದ ಮೂರನೆಯ ಫಕೀರ ಕೂಡ ಬಂದ. ರಬಿಯಾ ಈ ಮೂರನೆಯ ಫಕೀರನಿಗೆ ತನ್ನಲ್ಲಿದ್ದ ಎರಡು ರೊಟ್ಟಿಗಳನ್ನೂ ಕೊಟ್ಟುಬಿಟ್ಟಳು. ಇದರಿಂದ ಎಲ್ಲರಿಗೂ ಆಶ್ಚರ್ಯವಾಯಿತು. ಸ್ವಲ್ಪಹೊತ್ತಿನಲ್ಲಿಯೇ ಒಬ್ಬ ಸೇವಕನು ಕೆಲವು ರೊಟ್ಟಿಗಳನ್ನು ನೀಡಿದ. ರಬಿಯಾ ಅವುಗಳನ್ನು ಎಣಿಸಿದಳು. ''ಏನೋ ವ್ಯತ್ಯಾಸವಾಗಿದೆ. ಇನ್ನೆರಡು ರೊಟ್ಟಿಗಳು ಬರ ಬೇಕಾಗಿದೆಯಲ್ಲ'' ಎಂದಳು. ಅಷ್ಟರಲ್ಲಿ ಇನ್ನೊಬ್ಬ ಸೇವಕ ಇನ್ನೆರಡು ರೊಟ್ಟಿಗಳನ್ನು ತಂದುಕೊಟ್ಟ. ''ಈಗ ಸರಿಯಾಗಿದೆ'' ಎಂದು ರಬಿಯಾ ನಿರಾಳವಾದಳು. ಹಸಿವೆಯಿಂದ ನರಳುತ್ತಿದ್ದ ಫಕೀರರು ರೊಟ್ಟಿಗಳನ್ನು ತಿಂದು ಸಂತೋಷಪಟ್ಟರು. ಇದೆಲ್ಲ ಏನು ಎಂದು ನೆರೆದಿದ್ದ ಜನ ಕೇಳಿದಾಗ ರಬಿಯಾ ಹೀಗೆ ವಿವರಣೆ ನೀಡಿದಳು: ''ಆ ಎರಡು ಫಕೀರರರಿಗೆ ನಾನು ರೊಟ್ಟಿಗಳನ್ನು ಏಕೆ ನೀಡಲಿಲ್ಲ, ಗೊತ್ತೆ? ನನ್ನಲ್ಲಿದ್ದ ಎರಡು ರೊಟ್ಟಿಗಳು ಅವರಿಗೆ ಸಾಕಾಗುತ್ತಿರಲಿಲ್ಲ. ಆ ಮೂರನೆಯ ಫಕೀರ ಬಂದನಲ್ಲ, ಅವನಿಗೆ ಅಷ್ಟು ಸಾಕಾಗುತ್ತಿತ್ತು. ಅದಕ್ಕೇ ಅವನಿಗೆ ಎರಡು ರೊಟ್ಟಿಗಳನ್ನು ಕೊಟ್ಟೆ. ಆಗ ನನಗೆ ಭಗವಂತನ ಆಶ್ವಾಸನೆ ನೆನಪಿಗೆ ಬಂತು. 'ರಬಿಯಾ, ನೀನು ಎಷ್ಟು ಕೊಡುತ್ತೀಯೋ, ಅದಕ್ಕೆ ಹತ್ತುಪಟ್ಟು ಸ್ವೀಕರಿಸುತ್ತೀಯೆ' ಎನ್ನುವುದೇ ಆ ಆಶ್ವಾಸನೆ. ಈ ಪ್ರಕಾರ ರೊಟ್ಟಿಗಳನ್ನು ಕಳಿಸಿಕೊಡುವಂತೆ ಭಗವಂತನಲ್ಲಿ ಪ್ರಾರ್ಥನೆ ಮಾಡಿಕೊಂಡೆ. ಪ್ರಾರ್ಥನೆ ಮಾಡಿದ ಸ್ವಲ್ಪ ಸಮಯದ ನಂತರ ರೊಟ್ಟಿಗಳು ಬಂದವು. ನಾನು ಎಣಿಸಿ ನೋಡಿದಾಗ ಕೇವಲ ಹದಿನೆಂಟು ರೊಟ್ಟಿಗಳು ಮಾತ್ರವೇ ಇದ್ದವು. ಭಗವಂತನ ಆಶ್ವಾಸನೆಯಂತೆ, ನಾನು ಕೊಟ್ಟ ಎರಡು ರೊಟ್ಟಿಗಳ ಹತ್ತು ಪಟ್ಟು ಎಂದರೆ, ಇಪ್ಪತ್ತು ರೊಟ್ಟಿಗಳು ಬರಬೇಕಾಗಿತ್ತು. ಅದಕ್ಕೇ ಆ ಹದಿನೆಂಟು ರೊಟ್ಟಿಗಳನ್ನು ಸ್ವೀಕರಿಸುವುದಕ್ಕೆ ನಾನು ಹಿಂಜರಿದೆ. ಅದಕ್ಕಾಗಿ ಸ್ವಲ್ಪಹೊತ್ತು ಕಾಯುತ್ತಿದ್ದೆ. ಅಷ್ಟರಲ್ಲಿ ಮಿಕ್ಕ ಎರಡು ರೊಟ್ಟಿಗಳೂ ಬಂದವು. ಭಗವಂತನ ಮಾತು ಸುಳ್ಳಾಗಲು ಸಾಧ್ಯವೆ?''

ರಬಿಯಾ ಭಗವಂತನ ಪ್ರತ್ಯಕ್ಷ ಸಾನ್ನಿಧ್ಯವನ್ನು ಅನುಭವಿಸುತ್ತಿದ್ದಳು. ಉನ್ನತ ಮಟ್ಟದ ಭಗವತ್ಪ್ರೇಮವನ್ನು ಭಾವಿಸುತ್ತಿದ್ದಳು. ಅವಳ ಒಂದು ಬೋಧನೆ ಹೀಗಿದೆ: ''ಓ ಮಾನವ, ಭಗವಂತನನ್ನು ನೋಡಲು ನೀನು ಕಾತರನಾಗಿದ್ದರೆ, ನಿನ್ನ ಕೂದಲನ್ನು ಕಿತ್ತುಕೊಳ್ಳುವಷ್ಟು, ಗೋಡೆಗೆ ನಿನ್ನ ತಲೆಯನ್ನು ಹೊಡೆದುಕೊಳ್ಳುವಷ್ಟು ವ್ಯಾಕುಲತೆ ನಿನ್ನಲ್ಲಿದ್ದರೆ – ಹಾಗಿದ್ದರೂ ಕೂಡ – ಸ್ವಲ್ಪ ಸಹನೆಯನ್ನು ತೋರಿಸು. ಭಗವಂತನು ಆ ಸಮಯದಲ್ಲಿಯೂ ನಿನ್ನೊಡನೆ ಇದ್ದೇ ಇದ್ದಾನೆ ಎಂಬ ಖಚಿತ ವಿಶ್ವಾಸವನ್ನು ಇಟ್ಟುಕೋ. ಅವನ ಸಾನ್ನಿಧ್ಯ ಮಾತ್ರವೇ ಅಂಥ ಕಾತರತೆಯನ್ನು ಭಕ್ತನಲ್ಲಿ ಉದ್ದೀಪನಗೊಳಿಸಬಲ್ಲದು.''


ನಿಜವಾದ ಪ್ರಾರ್ಥನೆಯನ್ನು ಮಾಡುವುದು ಹೇಗೆ ಎಂದು ಕೇಳಿದಾಗ ರಬಿಯಾ ಹೀಗೆ ಉತ್ತರವಿತ್ತಳು: ''ಪ್ರಾರ್ಥನೆಯ ಸಮಯದಲ್ಲಿ ಹೃದಯ ಪರಿಶುದ್ಧವಾಗುತ್ತದೆ. ಆಗ ಅದನ್ನು ಮುಕ್ತವಾಗಿ ಭಗವಂತನಿಗೆ ಅರ್ಪಿಸಬೇಕು.''

ರಬಿಯಾಳ ಅಂತಿಮ ದಿನಗಳ ಬಗ್ಗೆ ನಮಗೆ ಅಷ್ಟು ತಿಳಿದು ಬಂದಿಲ್ಲ. ಅವಳು ಕ್ರಿ.ಶ. ೭೫೩ರಲ್ಲಿ, ಜೆರುಸಲೆಮ್ ನಗರದಲ್ಲಿ ಆಕೆ ದೇಹತ್ಯಾಗ ಮಾಡಿದಳು. ಪ್ರಸಿದ್ಧ ಸೂಫಿ ಕವಿ ಫರಿಯುದ್ದೀನ್ ಅತ್ತಾರ್ ರಬಿಯಾಳ ಉಪದೇಶಗಳನ್ನು ಸಂಗ್ರಹಿಸಿ, ಸಂರಕ್ಷಿಸಿದನು. ಹೀಗಾಗಿ ಆಕೆಯ ಬೋಧನೆಗಳಲ್ಲಿನ ಪವಿತ್ರತೆಯು ಇಂದಿಗೂ ಉಳಿದುಬಂದಿದೆ. ಎಂದೆಂದು ಅವುಗಳನ್ನು ಜನರು ಓದುತ್ತಾರೋ, ಅಂದೆಲ್ಲ ಅವರನ್ನು ಸ್ಫೂರ್ತಿಗೊಳಿಸುತ್ತವೆ.

ರಬಿಯಾಳ ಜೀವನ ಒಂದು ದಿವ್ಯ ಕಾವ್ಯ. ಆಕೆಯ ಉಪದೇಶಗಳು ರತ್ನದಷ್ಟು ಅಮೂಲ್ಯವಾದುವು. ಕಾಲ ಅವುಗಳ ಮಹತ್ವವನ್ನು ಎಂದಿಗೂ ಅಳಿಸಲಾಗದು, ಕಾರಣ ಆಕೆಯ ಜೀವನ ಮತ್ತು ಉಪದೇಶಗಳು ಅನಂತ ಪರಮಾತ್ಮನೆಡೆಗೆ ಜೀವಾತ್ಮನ ಉಡ್ಡಯಣದ ಪವಿತ್ರ ಮತ್ತು ನಿಸ್ಸಂದಿಗ್ಧ ದಾಖಲೆಗಳು. ✳

(ಆಧಾರ : ***Rabia – The Slave Girl,*** by Aga Syed Ibrahim Dara – Prabuddha Bharata, August 1933)

**ಯುವಚೇತನ**



**ಅ**ನೇಕ ಎಕರೆಗಳಲ್ಲಿ ಹಬ್ಬಿರುವ ದೊಡ್ಡದೊಂದು ಆಲದ ಮರ ಬಹುಶಃ ಸಾಸಿವೆಕಾಳಿನ ಎಂಟನೇ ಒಂದು ಭಾಗದಷ್ಟು ಕೂಡ ದೊಡ್ಡದಾಗಿಲ್ಲದ ಅದರ ಸಣ್ಣ ಬೀಜದಲ್ಲಿತ್ತು . ಆ ಶಕ್ತಿಯ ಮೊತ್ತವೆಲ್ಲ ಅಲ್ಲಿ ಅಡಗಿತ್ತು. ಪ್ರಚಂಡ ಮೇಧಾಶಕ್ತಿ ಜೀವಾಣುವಿನಲ್ಲಿ ಸುಪ್ತವಾಗಿರುವುದು ನಮಗೆ ಗೊತ್ತಿದೆ. ಅನಂತ ಶಕ್ತಿ ಏಕೆ ಅಲ್ಲಿ ಇರಬಾರದು? ಅದು ಹಾಗಿರುವುದೆಂದು ನಮಗೆ ಗೊತ್ತಿದೆ. ಆ ಸತ್ಯ ವಿರೋಧಾಭಾಸದಂತೆ ನಮಗೆ ತೋರಬಹುದು. ಆದರೆ ಅದು ಸತ್ಯ . ನಾವೆಲ್ಲರೂ ಜೀವಾಣುವಿನಿಂದ ಬಂದಿರುವೆವು. ಈಗ ನಮ್ಮಲ್ಲಿರುವ ಎಲ್ಲಾ ಶಕ್ತಿಯೂ ಅಲ್ಲಿ ಸುಪ್ತವಾಗಿರುವುದು. ಅದೆಲ್ಲ ಆಹಾರದಿಂದ ಬಂದಿತೆಂದು ಹೇಳಲಾಗುವುದಿಲ್ಲ. ಆಹಾರವನ್ನು ನೀವು ಬೆಟ್ಟದಂತೆ ರಾಶಿ ಹಾಕಿದರೆ ಏನು ಶಕ್ತಿ ಉದ್ಭವಿಸುತ್ತದೆ? ಆ ಶಕ್ತಿ ಸುಪ್ತ ರೀತಿಯಲ್ಲಿ ಇತ್ತು . ಆದರೂ ಅಲ್ಲಿ ಶಕ್ತಿ ಇತ್ತು . ಅದರಂತೆಯೆ ಮಾನವನಿಗೆ ತಿಳಿಯಲಿ ತಿಳಿಯದೆ ಇರಲಿ ಅನಂತಶಕ್ತಿ ಅವನಾತ್ಮನಲ್ಲಿದೆ. ಅದರ ಅರಿವು ನಮಗೆ ಆದಾಗ ಅದು ಜಾಗೃತವಾಗುವುದು. *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೨, ಪು.೨೮೬)*